**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಃ 1 /2022**

**ಸಾಕ್ಷಿದಾರರ ಹೆಸರು ಃ ಅಂಬುಜ ಆರ್**

**ಸಿ.ಡಬ್ಲ್ಯೂ - 01**

**ಗಂಡನ ಹೆಸರು ಃ ಮುನಿರಾಜು ಕೆ ಸಿ**

**ಪಿ.ಡಬ್ಲ್ಯೂ - 01**

**ವಯಸ್ಸು ಃ 36 ವರ್ಷ**

**ಉದ್ಯೋಗ ಃ ಪತ್ರಾಂಕಿತ ಆಪ್ತ ಸಹಾಯಕರು**

**ವಾಸಸ್ಥಳ ಃ ಬೆಂಗಳೂರು**

**ದಿನಾಂಕಃ 14.06.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ**

ನಾನು 2020 ರಿಂದ 2021 ರವರೆಗೆ ಶೃಂಗೇರಿಯಲ್ಲಿ ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 09/10/2020 ರಂದು ನಮಗೆ ಚಿಕ್ಕಮಗಳೂರು ಜಿಲ್ಲಾಧಿಕಾರಿಯವರ ಕಚೇರಿಯಿಂದ ಸರ್ವೇ ನಂಬರ್ 215 ರಲ್ಲಿ ಮಣ್ಣನ್ನು ಅಗೆದಿದ್ದಾರೆ ಎಂದು ಮತ್ತು ಸದರಿಯವರ ವಿರುದ್ಧ ಕ್ರಮ ಕೈಗೊಳ್ಳಲು ನಮಗೆ ಪತ್ರ ಬಂದಿದ್ದು, ಈ ಸಂಬಂಧ ನಾನು ದಿಃ 02/12/2020 ರಂದು ರಾತ್ರಿ 9 ಗಂಟೆಗೆ ನಾನು ದೂರನ್ನು ಟೈಪ್ ಮಾಡಿ ನಮ್ಮ ಕಚೇರಿಯ ಸಿಬ್ಬಂದಿಯಾದ ಸುರೇಶ್ ರವರಿಗೆ ಕೊಟ್ಟು ಠಾಣೆಗೆ ಕಳುಹಿಸಿರುತ್ತೇನೆ. ಈ ಸಂಬಂಧ ಪೋಲಿಸರು ದಿಃ 3/12/2020 ರಂದು ಬೆಳಿಗ್ಗೆ 10 ರಿಂದ 11 ಗಂಟೆ ವರೆಗೆ ನಾನು ತೋರಿಸಿರುವ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ. ಪೋಲಿಸರು ದಿಃ 04/12/2020 ರಂದು ನನಗೆ 2018 ರಿಂದ 2020 ರವರೆಗೆ ತಹಶೀಲ್ದಾರ್ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಸಿರುವ ಅಧಿಕಾರಿಗಳ ವಿವರಗಳನ್ನು ಕೇಳಿ ಮನವಿ ಸಲ್ಲಿಸಿದ್ದು ಈ ಸಂಬಂಧ ನಾನು ದಿಃ 11/01/2021 ರಂದು ಸದರಿ ವಿವರಣೆಗಳನ್ನು ವರದಿ ಸಮೇತ ನೀಡಿರುತ್ತೇನೆ. ದಿಃ 25/06/2021 ರಂದು ನನಗೆ ಠಾಣೆಯಿಂದ ಸದರಿ ಸರ್ವೇ ನಂಬರ್ 215 ಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಕೋರಿ

ಮನವಿ ಬಂದಿದ್ದು ಈ ಸಂಬಂಧ ದಿಃ 17/07/2021 ರಂದು ಸರ್ವೇ ನಂಬರ್ 215ಕ್ಕೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿ 1-ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು, ಸಾಕ್ಷಿಯ ಸಹಿ 2-ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಮನವಿ ನೋಡಿ ಗುರುತಿಸಿದ್ದು ಅದನ್ನು ನಿಪಿ4 ಎಂದು ಗುರುತಿಸಲಾಯಿತು. ಸಾಕ್ಷಿಯು 2 ಪುಟಗಳ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 5, ಸಾಕ್ಷಿಯ ಸಹಿ 5-ಎ ಎಂದು ಎಂದು ಗುರುತಿಸಲಾಯಿತು. ಸಾಕ್ಷಿಯು ಮತ್ತೊಂದು ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ 6 ಎಂದು ಗುರುತಿಸಲಾಯಿತು. ಸಾಕ್ಷಿಯು ವರದಿ ಮತ್ತು ಪಹಣಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದು ಅದನ್ನು ಒಟ್ಟಾಗಿ ನಿಪಿ 7 ಎಂದು, ಸಾಕ್ಷಿಯ ಸಹಿ 7-ಎ ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಐ ಎಸ್ ಟಿ ವಕೀಲರಿಂದ ಃ</u>**

ಯಾವುದಾದರೂ ಹಿಡುವಳಿ ಜಾಗದಲ್ಲಿ ಒಬ್ಬ ವ್ಯಕ್ತಿ ಅಭಿವೃದ್ಧಿ ಪಡಿಸಬೇಕಾದರೆ ನಮ್ಮ ಅನುಮತಿ ಪಡೆಯಬೇಕಾಗಿಲ್ಲ ಎಂದರೆ ಸಾಕ್ಷಿಯು ಅವರ ಹಿಡುವಳಿ ಜಾಗದಲ್ಲಿ ಅಭಿವೃದ್ಧಿ ಪಡಿಸಬೇಕಾದರೆ ಅನುಮತಿ ಅಗತ್ಯ ಇಲ್ಲ ಎಂದು ನುಡಿದಿರುತ್ತಾರೆ. ನಮ್ಮ ಕಚೇರಿಗೆ ಯಾವುದೇ ದೂರು ಅಥವಾ ಅರ್ಜಿ ಬಂದಲ್ಲಿ ಅದಕ್ಕೆ ಒಂದು ಸಂಖ್ಯೆ ನೀಡಿ ಕಡತವನ್ನು ನಿರ್ವಹಿಸುತ್ತೇವೆ ಎಂದರೆ ಸರಿ. ಸದರಿ ದೂರಿನಲ್ಲಿ ಎದುರುದಾರರಿಂದ ದೂರದಾರರಿಗೆ ತೊಂದರೆ ಆದಲ್ಲಿ ಎದುರುದಾರರನ್ನು ಕರೆಸಿ ವಿಚಾರಣೆ ಮಾಡುತ್ತೇವೆ ಎಂದರೆ ಸರಿ. ಅಗತ್ಯವಿದ್ದಲ್ಲಿ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡುತ್ತೇವೆ ಎಂದರೆ ಸರಿ. 2018ರಿಂದ 2020ರವರೆಗೂ ಆರೋಪಿ ವಿರುದ್ಧ ಯಾವುದೇ ದೂರು ಬಂದಿರುವುದಿಲ್ಲ ಎಂದರೆ ಸರಿ. ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ಕಚೇರಿಯಿಂದ ಮಾಹಿತಿ ಬರುವವರೆಗೂ ಆರೋಪಿ ವಿರುದ್ಧ ಯಾವುದೇ ದೂರು ಬಂದಿಲ್ಲ ಎಂದರೆ ಸರಿ. ನಿಪಿ 1 ರಲ್ಲಿರುವ ಅಂಶಗಳು ಜಿಲ್ಲಾ ಕಚೇರಿಯಿಂದ ಬಂದಿರುವ ಯಥಾವತ್ತು ದೂರಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸ್ಥಳಕ್ಕೆ ಭೇಟಿ ನೀಡಿ ನಂತರ ದೂರನ್ನು ನೀಡಿರುತ್ತೇನೆ. ಚಿಕ್ಕಮಗಳೂರು ಜಿಲ್ಲಾ ಕಚೇರಿಯಿಂದ ಮಾಹಿತಿ ಬರುವವರೆಗೆ ನನಗೆ ಪ್ರಕರಣ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ಸರ್ವೇ ನಂಬರ್ 215ಕ್ಕೆ ಸಂಬಂಧಿಸಿ ಯಾವುದೇ ಸರ್ವೇ ಮಾಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು 2018ರಲ್ಲಿ

ಸದರಿ ಸ್ಥಳಕ್ಕೆ ಸಂಬಂಧಿಸಿ ಸರ್ವೇ ಮಾಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. 2018 ರಿಂದ 2020 ರವರೆಗೂ ಸರ್ವೇ ನಂಬರ್ 215 ರ ಪ್ರದೇಶದಲ್ಲಿ ಯಾವುದೇ ಭೂಕುಸಿತ ಆಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಭೂಕುಸಿತ ಆಗುವ ಸಾಧ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ. ಭೂ ಮತ್ತು ಗಣಿ ವಿಜ್ಞಾನದ ವಿಷಯದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ಮೇಲಾಧಿಕಾರಿಗಳ ಆದೇಶದಂತೆ ಸದರಿ ಪ್ರಕರಣದಲ್ಲಿ ನಡೆದುಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ಥಳಕ್ಕೆ ಭೇಟಿ ನೀಡಿ ನಂತರ ದೂರನ್ನು ನೀಡಿರುತ್ತೇನೆಂದು ನುಡಿದಿರುತ್ತಾರೆ. ನಾನು ಸ್ಥಳಕ್ಕೆ ಭೇಟಿ ನೀಡುವುದಾಗಿ ತೋರಿಸಲು ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ಪೋಲಿಸರು ಮಹಜರ್ ಗೆ ನನಗೆ ಮುಂಚಿತವಾಗಿ ನೋಟಿಸ್ ಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪೋನಿನಲ್ಲಿ ವಿಷಯ ತಿಳಿಸಿರುತ್ತಾರೆಂದು ನುಡಿದಿರುತ್ತಾರೆ. ನಿಪಿ 1 ನ್ನು ನಾನು ಸುರೇಶ್ ಸಿಬ್ಬಂದಿಯವರೆಗೆ ಕೊಟ್ಟು ಠಾಣೆಗೆ ಕಳುಹಿಸಿರುತ್ತೇನೆಂದು ನಿಪಿ 1 ರಲ್ಲಿ ನಮೂದಿರುವುದಿಲ್ಲ. ಈ ಪ್ರಕರಣದಲ್ಲಿ ನಾನು ವಿಚಾರಣೆಗಾಗಿ ಠಾಣೆಗೆ ಹೋಗಿರುವುದಿಲ್ಲ. ಮಹಜರ್ ನ್ನು ಹೊರತು ಪಡಿಸಿ ಪೋಲಿಸರು ಬೇರೆ ದಾಖಲೆಗಳಲ್ಲಿ ನನ್ನ ಸಹಿ ಪಡೆದಿರುವುದಿಲ್ಲ ಎಂದರೆ ಸರಿ. ಪ್ರಕರಣದಲ್ಲಿ ನನಗೆ ಯಾವುದೇ ಮಾಹಿತಿ ಇಲ್ಲದ್ದಿದ್ದರಿಂದ ನಾನು ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಹೇಳಿದಂತೆ ಯಾವುದೇ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಕ್ರಮ ಸಕ್ರಮದಲ್ಲಿ ಅರ್ಜಿ ನೀಡಿರುವವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದರೆ ಸರಿ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 14.06.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

Sd/-
**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**